# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಡಾ// ರಾಜ್‌ಕುಮಾರ್ ವಾರ್ಡ್ ಸಂಖ್ಯೆ: 106

---

ಸಂ : ಸ.ಅ(ವಾ–106)/ಪಿ.ಆರ್/ /2021–22 ದಿನಾಂಕ: 18/**09/2021**

## ವಾರ್ಡ್ ಸಮಿತಿ ಸಭೆಯ ನಡವಳಿ

ದಿನಾಂಕ: 18–09–2021 ರಂದು ವಾರ್ಡ್ ಸಂಖ್ಯೆ: 106 **ಡಾ// ರಾಜ್‌ಕುಮಾರ್ ವಾರ್ಡ್** ನಲ್ಲಿ ಶ್ರೀಮತಿ ಗೀತಾ ಎಲ್, ಕಾರ್ಯಪಾಲಕ ಅಭಿಯಂತರು, ಬಿಬಿಎಂಪಿ ಹಾಗೂ ವಾರ್ಡ್ ನಂ. 106 ರ ನೋಡಲ್ ಅಧಿಕಾರಿಗಳು ಇವರ ಅದ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿ

**ಹಾಜರಿದ್ದ ಅಧಿಕಾರಿ/ನೌಕರರು:–**

1) ಶ್ರೀಮತಿ. ಎನ್. ಅನ್ನಪೂರ್ಣ, ವೈಧ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಅ.ದಾಸರಹಳ್ಳಿ.
2) ಶ್ರೀ ತೀರ್ಥಪ್ರಸಾದ್, ಎಇಇ, ಘನತ್ಯಾಜ್ಯ ವಿಭಾಗ
3) ಶ್ರೀ ರೇಣುಕಾ ಪ್ರಸಾದ್. ಎ.ಆರ್.ಒ
4) ಶ್ರೀ ರಾಜೇಂದ್ರ ಕಂದಾಯ ಪರಿವೀಕ್ಷಕರು.
5) ಶ್ರೀ. ಅರುಣ್‌ಕುಮಾರ್, ಸಹಾಯಕ ಅಭಿಯಂತರರು
6) ನಾಗರಾಜ್. ಕೆ.ಬಿ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್‌ಬಿ
7) ಆನಂದ್, ಹೆಚ್.ವಿ, ಸಹಾಯಕ ಅಭಿಯಂತರರು, ಬೆಸ್ಕಾಂ
8) ನಾಗಣ್ಣಗೌಡ, ಹಿರಿಯ ಆರೋಗ್ಯ ಪರಿವೀಕ್ಷಕರು
9) ಶ್ರೀ ಚಂದ್ರಶೇಖರ್, ಕಿರಿಯ ಆರೋಗ್ಯ ಪರಿವೀಕ್ಷಕರು
10) ಶ್ರೀ ಅವಿನಾಶ್, ಸೂಪರ್‌ವೈಸರ್, ಘನತ್ಯಾಜ್ಯ
11) ಶ್ರೀ ರಾಜೇಶ್, ಸೂಪರ್‌ವೈಸರ್, ಘನತ್ಯಾಜ್ಯ
12) ಶ್ರೀ ಮುರಳಿ, ತೆರಿಗೆ ವಸೂಲಾತಿಗಾರರು.

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು/ಹಾಜರಿದ್ದವರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

- ಸಭೆಯಲ್ಲಿ ಈ ಹಿಂದಿನ ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಬಗ್ಗೆ ಚರ್ಚಿಸಲಾಯಿತು.
- ಮಾನ್ಯ ಅಧ್ಯಕ್ಷರು ಮಾತನಾಡಿ 2021–22 ನೇ ವರ್ಷದ ಆಯವ್ಯಯಕ್ಕೆ ಸಂಭಂದಿಸಿದಂತೆ ಪಿ.ಒ.ಡಬ್ಲ್ಯೂ ಅನುದಾನದಡಿಯಲ್ಲಿ ರೂ.60.00 ಲಕ್ಷಗಳನ್ನು ಮೀಸಲಿಟ್ಟಿದ್ದು, ವಾರ್ಡ್‌ನ ಅಭಿವೃದ್ದಿ ಕಾಮಗಾರಿಗಳು

ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸಲು ತಲಾ ರೂ.20.00 ಲಕ್ಷಗಳಂತೆ ಬೋರ್‌ವೆಲ್ ನಿರ್ವಹಣೆ, ರಸ್ತೆ ಹಾಗೂ ಚರಂಡಿಗಳ ನಿರ್ವಹಣೆ ಮತ್ತು ರಸ್ತೆ ಗುಂಡಿಗಳ ನಿರ್ವಹಣೆ ಒಟ್ಟು ರೂ.60.00 ಲಕ್ಷಗಳನ್ನು ವಾರ್ಡ್‌ಗೆ ಮೀಸಲಿಡಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

- **ಆರೋಗ್ಯ ಇಲಾಖೆ:-** ಮಾನ್ಯ ಅಧ್ಯಕ್ಷರು ಡಾ// ಅನ್ನಪೂರ್ಣ, ವೈಧ್ಯಾಧಿಕಾರಿಗಳೊಂದಿಗೆ ಚರ್ಚಿಸಿ ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ, ತರಕಾರಿ ಮಾರುವವರಿಗೆ ಹಾಗೂ ಎಲ್ಲಾ ವರ್ಗದ ಕೆಲಸಗಳನ್ನು ಮಾಡುವ ಜನರಿಗೆ ಕೊರೋನಾ ಲಸಿಕೆ ನೀಡಬೇಕೆಂದು ತಿಳಿಸದರು ಹಾಗೂ ಏನಾದರೂ ಕುಂದುಕೊರತೆಗಳಿದ್ದರೆ ಕೂಡಲೇ ತಿಳಿಸಬೇಕೆಂದು ತಿಳಿಸದರು.

- **ಸ್ವಚ್ಛತೆ ಮತ್ತು ಘನತ್ಯಾಜ್ಯ ವಿಲೇವಾರಿ ಬಗ್ಗೆ:-** ಮಾನ್ಯ ಅಧ್ಯಕ್ಷರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಹಾಗೂ ಕಟ್ಟಡದ ವ್ಯಾಜ್ಯಗಳನ್ನು ಕೂಡಲೇ ತೆರವುಗೊಳಿಸುವಂತೆ ತಿಳಿಸಿದರು.

- **ಬೆಸ್ಕಾಂ:** – ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಹಾಗೂ ಫುಟ್ಪಾತ್ ಮೇಲಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸುವಂತೆ ಹಾಗೂ ಎಂ.ಸಿ ಬಡಾವಣೆಯಲ್ಲಿ ಭೂಗತ ಕೇಬಲ್ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದ್ದು ಶೀಘ್ರವಾಗಿ ಪೂರ್ಣಗೊಳಿಸಲು ಮಾನ್ಯ ಅಧ್ಯಕ್ಷರು ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರು.

- **ಬಿ.ಡಬ್ಲ್ಯೂ.ಎಸ್.ಎಸ್.ಬಿ : –** ವಾರ್ಡ್ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಮ್ಯಾನ್ ಹೋಲ್ ಮತ್ತು ಸ್ಯಾನಿಟರಿ ಪೈಪ್‌ಗಳ ಅಳವಡಿಕೆಗಾಗಿ ರಸ್ತೆಗಳನ್ನು ಕತ್ತರಿಸಿದ್ದು ಕೂಡಲೇ ಕಾಮಗಾರಿಯನ್ನು ಮುಗಿಸುವಂತೆ ಮತ್ತು ಸರಿಯಾದ ರೀತಿಯಲ್ಲಿ ಗುಂಡಿಗಳನ್ನು ಮುಚ್ಚಿ ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಮಾಡಬೇಕೆಂದು ತಿಳಿಸಿದರು.

- **ಬೀದಿದೀಪಗಳು :** ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಬೀದಿದೀಪಗಳು ಸರಿಯಾಗಿ ಉರಿಯುತ್ತಿಲ್ಲವೆಂದು ಸಾರ್ವಜನಿಕರು ತಿಳಿಸಿದ್ದು ಕೂಡಲೇ ಕ್ರಮಕೈಗೊಳ್ಳುವಂತೆ ಮಾನ್ಯ ಅಧ್ಯಕ್ಷರು ಸಂಭಂದಿಸಿದ ಅಧಿಕಾರಿಗೆ ತಿಳಿಸಿದರು.
- ಮಾನ್ಯ ಅಧ್ಯಕ್ಷರು ಮಾತನಾಡಿ ಕಂದಾಯ ಇಲಾಖೆಗೆ ಸಂಭಂದಿಸಿದ ವಿವರಗಳನ್ನು ಪಡೆದುಕೊಂಡರು.
- ಮಾನ್ಯ ಅಧ್ಯಕ್ಷರು ಪ್ರಗತಿಯಲ್ಲಿರುವ ಕಾಮಗಾರಿಗಳ ಬಗ್ಗೆ ವಿವರ ಪಡೆದುಕೊಂಡರು.
- ಮಾನ್ಯ ಅಧ್ಯಕ್ಷರು ರಸ್ತೆ ಗುಂಡಿಗಳನ್ನು ಶೀಘ್ರವಾಗಿ ಮುಚ್ಚಲು ಕ್ರಮಕೈಗೊಳ್ಳಬೇಕೆಂದು ತಿಳಿಸಿದರು.
- ಮಾನ್ಯ ಅಧ್ಯಕ್ಷರು ವಾರ್ಡ್ ಮಾರ್ಷಲ್‌ಗಳು ತಮ್ಮ ಕಾರ್ಯವನ್ನು ಸರಿಯಾಗಿ ನಿರ್ವಹಿಸುವಂತೆ ತಿಳಿಸಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳಲು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸುಲು ಸೂಚಿಸಿ ಮುಂದಿನ ಸಭೆಗೆ ಎಲ್ಲಾ ಅಧಿಕಾರಿ ಸಿಬ್ಬಂದಿಗಳು ಹಾಜರಿರಲು ತಿಳಿಸಿ ಸಭೆಯನ್ನು ಮುಕ್ತಾಯ ಮಾಡಿದರು.

18/07/24

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.106 ಡಾ//ರಾಜ್‌ಕುಮಾರ್ ವಾರ್ಡ್
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

18/07/24

ವಾರ್ಡ್ ಸಮಿತಿ ಅದ್ಯಕ್ಷರು
ಹಾಗೂ ವಾರ್ಡ್ ನೋಡಲ್ ಅಧಿಕಾರಿಗಳು
ವಾರ್ಡ್ ನಂ.106 ಡಾ//ರಾಜ್‌ಕುಮಾರ್ ವಾರ್ಡ್
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1) ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸದೆ.
2) ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸದೆ.
3) ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸದೆ.
4) ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸದೆ.
5) ಮುಖ್ಯ ಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸದೆ.
6) ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸದೆ.
7) ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರ ಮಾಹಿತಿಗಾಗಿ ಕಳುಹಿಸಿದೆ.
9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂಎಸ್.ಎಸ್.ಬಿ ರವರ ಮಾಹಿತಿಗಾಗಿ ಕಳುಹಿಸಿದೆ